# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

## ವಿದ್ಯಾಸಂಗಮ, ಬೆಳಗಾವಿ-591156

# ಸಿಂಡಿಕೇಟ್ ಸಭೆಯ ನಡಾವಳಿಗಳು

ದಿನಾಂಕ : ಶುಕ್ರವಾರ 01-03-2019

ಸಮಯ : ಮಧ್ಯಾಹ್ನ 12 : 30 ಘಂಟೆ

ಸ್ಥಳ : ಸಿಂಡಿಕೇಟ್ ಸಭಾಂಗಣ, ರಾ.ಚ.ವಿ.ವಿ. ಬೆಳಗಾವಿ

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಾಮಾನ್ಯ ಸಿಂಡಿಕೇಟ್ ಸಭೆಯ ದಿನಾಂಕ **01 ಮಾರ್ಚ್ 2019** ರಂದು **ಮಧ್ಯಾಹ್ನ 12.30** ಘಂಟೆಗೆ ನಡೆದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | | |
|---|---|---|
| 1. | **ಪ್ರೊ. ಶಿವಾನಂದ ಬಿ. ಹೊಸಮನಿ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಶ್ರೀ ನರಸಿಂಹ ರಾಯಚೂರ | ಸದಸ್ಯರು |
| 3. | ಶ್ರೀ ಬಸವರಾಜ ಎನ್. ಚಿಕ್ಕನಗೌಡರ | ಸದಸ್ಯರು |
| 4. | ಡಾ. ಎಚ್. ಐ. ತಿಮ್ಮಾಪೂರ | ಸದಸ್ಯರು |
| 5. | ಡಾ. ಎಸ್. ಎಂ ಜೋಶಿ | ಸದಸ್ಯರು |
| 6. | ಡಾ. ಎ.ಡಿ. ಟೊಣಗೆ | ಸದಸ್ಯರು |
| 7. | ಡಾ.(ಶ್ರೀಮತಿ) ಎಸ್.ಐ. ಮಡಿವಾಳಪ್ಪಾಗೋಳ | ಸದಸ್ಯರು |
| 8. | ಡಾ.(ಶ್ರೀಮತಿ) ಪೂರ್ಣಿಮಾ ಪಟ್ಟಣಶಟ್ಟಿ | ಸದಸ್ಯರು |
| 9. | **ಪ್ರೊ. ರಂಗರಾಜ ವನದುರ್ಗ** | **ಕುಲಸಚಿವರು(ಮೌ) ಹಾಗೂ ಸದಸ್ಯರು** |
| 10. | **ಪ್ರೊ. ಸಿದ್ದು. ಪಿ. ಆಲಗೂರ** | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

## II. ಹಾಜರಾಗದ ಸದಸ್ಯರು:

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರ |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

**ವಿದ್ಯಾಸಂಗಮ, ಬೆಂಗಳೂರು–ಪೂನಾ ರಾ.ಹೆ.–4, ಬೆಳಗಾವಿ–591156**

**ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು**

**ವಿಷಯ:** ದಿನಾಂಕ 01 ಮಾರ್ಚ್ 2019 ರಂದು ಜರುಗಿದ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡಾವಳಿಗಳು.

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2)
2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 20–02–2019
3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 21–02–2019

**ಪ್ರಸ್ತಾವನೆ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರ ಸಭೆ ಆಯೋಜನೆ ಮಾಡಿ ಮಾನ್ಯ ಕುಲಪತಿಗಳು ಹಾಗೂ ಪ್ರಾಧಿಕಾರದ ಸಭಾಧ್ಯಕ್ಷರಾದ ಪ್ರೊ. ಶಿವಾನಂದ ಬಿ. ಹೊಸಮನಿ ಇವರು ಸಭೆಗೆ ಆಗಮಿಸಿದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಗೆ ಹೊಸದಾಗಿ ನಾಮನಿರ್ದೇಶನಗೊಂಡ ಪ್ರಾಂಶುಪಾಲರನ್ನು ಮಾನ್ಯ ಕುಲಪತಿಗಳು ಹೂ ಗುಚ್ಚ ನೀಡುವುದರ ಮೂಲಕ ಸ್ವಾಗತಿಸಿ ಸಭೆಗೆ ಪರಿಚಯಿಸಿದರು ಮತ್ತು ಹಿಂದೆ ಸದಸ್ಯರಾದಂತಹ ಪ್ರಾಂಶುಪಾಲರನ್ನು ವಿಶ್ವವಿದ್ಯಾಲಯದ ಪರವಾಗಿ ಕೃತಜ್ಞತೆ ಸಲ್ಲಿಸಿದರು.

ಕುಲಸಚಿವರು ಮತ್ತೊಮ್ಮೆ ಸಭೆಯನ್ನು ಸ್ವಾಗತಿಸಿ ವಿಷಯ ಸೂಚಿಗಳನ್ನು ಪ್ರಸ್ತಾಪಿಸಿದರು.

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರ ಸಭೆ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 01–03–2019 ರಂದು ಕೈಗೊಂಡ ತೀರ್ಮಾನಗಳು.**

| ಕ್ರ.ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 1 | 2019/03/01 | ಹಿಂದಿನ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು. |
| | ತೀರ್ಮಾನ | **ದಿನಾಂಕ 12–02–2019 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು.** |
| 2 | 2019/03/02 | ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಮುಖ್ಯಸ್ಥರುಗಳ ನೇಮಕಾತಿಗೆ ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳಾದ ಪ್ರೊ. ಎಸ್.ಓ. ಹಲಸಗಿ, ವಾಣಿಜ್ಯಶಾಸ್ತ್ರ ವಿಭಾಗ ಹಾಗೂ ಪ್ರೊ. ಮನಿಷಾ ನೇಸರಕರ, ಮರಾಠಿ ವಿಭಾಗ ಇವರನ್ನು ಮುಖ್ಯಸ್ಥರನ್ನಾಗಿ ನೇಮಕಾತಿ ಮಾಡಿದ್ದಕ್ಕಾಗಿ ಸಭೆಯು ಅನುಮೋದನೆ ನೀಡಿತು.** |
| 3 | 2019/03/03 | ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳಿಗೆ 2019ನೇ ಸಾಲಿಗೆ ಗಳಿಕೆ ರಜೆ ಹಾಗೂ ಪರಿವರ್ತಿತ ರಜೆಯನ್ನು ಮಂಜೂರು ಮಾಡಲು ಅನುಮತಿ ನೀಡುವ ಕುರಿತು. |
| | ತೀರ್ಮಾನ | **ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳಿಗೆ 2019ನೇ ಸಾಲಿಗೆ ಗಳಿಕೆ ರಜೆ ಹಾಗೂ ಪರಿವರ್ತಿತ ರಜೆಯನ್ನು ಮಂಜೂರು ಮಾಡಲು ಸಭೆಯು ಅನುಮತಿ ನೀಡಿತು.** |

| | | |
|---|---|---|
| 4 | 2019/03/04 | ಸರಕಾರದ ಆದೇಶದನ್ವಯ ಪ್ರಯಾಣ ಭತ್ಯೆ ದರಗಳ ಪರಿಷ್ಕರಣೆ ಮತ್ತು ಅರ್ಹತೆಗಳ ಮಾರ್ಪಾಡಿನ ಬಗ್ಗೆ ಶಿಫಾರಸ್ಸುಗಳನ್ನು ಪರಿಗಣಿಸಿ ವಿಶ್ವವಿದ್ಯಾಲಯದಲ್ಲಿ ಜಾರಿಗೊಳಿಸಲು ಅನುಮತಿ ಕುರಿತು. |
| | ತೀರ್ಮಾನ | **ಸರಕಾರದ ಆದೇಶದನ್ವಯ, ಪ್ರಯಾಣ ಭತ್ಯೆ ದರಗಳ ಪರಿಷ್ಕರಣೆ ಮತ್ತು ಅರ್ಹತೆಗಳ ಮಾರ್ಪಾಡಿನ ಬಗ್ಗೆ ಶಿಫಾರಸ್ಸುಗಳನ್ನು ಪರಿಗಣಿಸಿ ದಿ:01ನೇ ಜನವರಿ 2019 ರಿಂದ ಜಾರಿಗೊಳಿಸಲು ಸಭೆಯು ಅನುಮೋದನೆ ನೀಡಿತು.** |
| 5 | 2019/03/05 | ಎಸ್.ಎ. ಸಾರಂಗಮಠ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಇವರು ತಮ್ಮ ಮಹಾವಿದ್ಯಾಲಯದ ಹೆಸರು ಬದಲಾವಣೆಗೆ ವಿನಂತಿಸಿರುವ ಕುರಿತು. |
| | ತೀರ್ಮಾನ | **ಎಸ್.ಎ.ಸಾರಂಗಮಠ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಇವರ ವಿನಂತಿಯನ್ವಯ, ತಮ್ಮ ಮಹಾವಿದ್ಯಾಲಯದ ಹೆಸರನ್ನು 'ಶ್ರೀ ಫ.ಶಿ.ಶಿ.ಸಮಿತಿಯ ಶ್ರೀ ಮೃತ್ಯುಂಜಯ ಶಿವಯೋಗಿ, ಎಸ್.ಎ. ಸಾರಂಗಮಠ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸುರೇಬಾನ–591127 ತಾ: ರಾಮದುರ್ಗ, ಜಿ: ಬೆಳಗಾವಿ' ಎಂದು ಬದಲಾವಣೆ ಮಾಡಲು ಸಭೆಯು ಅನುಮತಿ ನೀಡಿತು.** |
| 6 | 2019/03/06 | 2017–18 ನೇ ಸಾಲಿಗೆ ಸಂಯೋಜನೆ ನೀಡುವುದಕ್ಕಾಗಿ ತನಿಖಾ ಸಮಿತಿಯವರು ಮಹಾವಿದ್ಯಾಲಯಗಳಿಗೆ ಪರಿಶೀಲನೆ ಮಾಡಿ, **ಶಿಫಾರಸ್ಸು ಮಾಡಿ** ಸಲ್ಲಿಸಿದ ವರದಿಗಳನ್ನು ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | **2017–18 ನೇ ಸಾಲಿಗೆ ಸಂಯೋಜನೆ ನೀಡುವುದಕ್ಕಾಗಿ ತನಿಖಾ ಸಮಿತಿಯವರು ಪರಿಶೀಲನೆ ಮಾಡಿ, ಶಿಫಾರಸ್ಸು ಮಾಡಿ ನೀಡಿರುವ ವರದಿಗಳನ್ನು ಸಭೆಯು ಪರಿಶೀಲಿಸಿ, ಅನುಮೋದಿಸಿತು.** |
| 7 | 2019/03/07 | 2019–20 ನೇ ಸಾಲಿಗೆ ವಿವಿಧ ಬಗೆಯ ಹೊಸ ಸಂಯೋಜನೆ ನೀಡುವುದಕ್ಕಾಗಿ ತನಿಖಾ ಸಮಿತಿಯವರು **ಶಿಫಾರಸ್ಸು ಮಾಡಿ** ನೀಡಿರುವ ವರದಿಗಳನ್ನು ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | **2019–20 ನೇ ಸಾಲಿಗೆ ವಿವಿಧ ಬಗೆಯ ಹೊಸ ಸಂಯೋಜನೆ ನೀಡುವುದಕ್ಕಾಗಿ ತನಿಖಾ ಸಮಿತಿಯವರು ಶಿಫಾರಸ್ಸು ಮಾಡಿ ನೀಡಿರುವ ವರದಿಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.** |
| 8 | 2019/03/08 | 2019–20 ನೇ ಸಾಲಿಗೆ ಮುಂದುವರಿಕೆ/ವಿಸ್ತರಣೆ/ಬಿ.ಎ., ಬಿ.ಕಾಂ., ಮತ್ತು ಸಿ.ಎಸ್ಸಿ., ಕೋರ್ಸ್‌ಗಳ ಪ್ರವೇಶ ಮಿತಿ ಹೆಚ್ಚಳ ಮತ್ತು ಶಾಶ್ವತ ಸಂಯೋಜನೆ ಮುಂದುವರಿಕೆಗಳ ಸಂಯೋಜನೆ ನೀಡುವುದಕ್ಕಾಗಿ ತನಿಖಾ ಸಮಿತಿಯವರು **ಶಿಫಾರಸ್ಸು ಮಾಡಿ** ನೀಡಿರುವ ವರದಿಗಳನ್ನು ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | **2019–20 ನೇ ಸಾಲಿಗೆ ಮುಂದುವರಿಕೆ/ವಿಸ್ತರಣೆ/ಬಿ.ಎ., ಬಿ.ಕಾಂ., ಮತ್ತು ಸಿ.ಎಸ್ಸಿ., ಕೋರ್ಸ್‌ಗಳ ಪ್ರವೇಶ ಮಿತಿ ಹೆಚ್ಚಳ, ಶಾಶ್ವತ ಸಂಯೋಜನೆ ಮುಂದುವರಿಕೆ, ಹಾಗೂ ಸಂಯೋಜನೆ ನೀಡುವುದಕ್ಕಾಗಿ ತನಿಖಾ ಸಮಿತಿಯವರು ಶಿಫಾರಸ್ಸು ಮಾಡಿ ನೀಡಿರುವ ವರದಿಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.** |
| 9 | 2019/03/09 | 2019–20 ನೇ ಸಾಲಿಗೆ ಸಂಯೋಜನೆ ನೀಡುವುದಕ್ಕಾಗಿ ತನಿಖಾ ಸಮಿತಿಯವರು **ಶಿಫಾರಸ್ಸು ಮಾಡದೇ** ನೀಡಿರುವ ವರದಿಗಳನ್ನು ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | **2019–20 ನೇ ಸಾಲಿಗೆ ಸಂಯೋಜನೆ ನೀಡುವುದಕ್ಕಾಗಿ ತನಿಖಾ ಸಮಿತಿಯವರು ಶಿಫಾರಸ್ಸು ಮಾಡದೇ ನೀಡಿರುವ ವರದಿಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.** |

| | | |
|---|---|---|
| 10 | 2019/03/10 | ವಿಶ್ವವಿದ್ಯಾಲಯದ ಸ್ನಾತಕ ಬಿ.ಎಸ್ಸಿ (Interior Design) ಕೋರ್ಸ್‌ನ ನಿಯಮಾವಳಿಗಳನ್ನು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | ವಿಶ್ವವಿದ್ಯಾಲಯದ ಸ್ನಾತಕ ಬಿ.ಎಸ್ಸಿ (Interior Design) ಕೋರ್ಸ್‌ನ ನಿಯಮಾವಳಿಗಳನ್ನು ಸಭೆಯು ಅನುಮೋದಿಸಿತು. |
| 11 | 2019/03/11 | ವಿಶ್ವವಿದ್ಯಾಲಯದ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯದ ಪರಿಷ್ಕೃತ ನಿಯಮಾವಳಿಗಳನ್ನು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | ವಿಶ್ವವಿದ್ಯಾಲಯದ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯದ ಪರಿಷ್ಕೃತ ನಿಯಮಾವಳಿಗಳನ್ನು ಸಭೆಯು ಅನುಮೋದಿಸಿತು. |
| 12 | 2019/03/12 | ಪಿಎಚ್.ಡಿ. ನಿಯಮಾವಳಿಗಳಲ್ಲಿ ತಿದ್ದುಪಡಿ ಮಾಡಿ ಅವುಗಳನ್ನು ಅಳವಡಿಸಿಕೊಳ್ಳಲು ಸಿದ್ಧಪಡಿಸಿದ ಕರಡು ಪ್ರತಿಯನ್ನು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | ಪಿಎಚ್.ಡಿ. ನಿಯಮಾವಳಿಗಳಲ್ಲಿ ತಿದ್ದುಪಡಿ ಮಾಡಿ ಅವುಗಳನ್ನು ಅಳವಡಿಸಿಕೊಳ್ಳಲು ಸಿದ್ಧಪಡಿಸಿದ ಕರಡು ಪ್ರತಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |
| 13 | 2019/03/13 | ವಿಶ್ವವಿದ್ಯಾಲಯದ ಸ್ನಾತಕ ಶಿಕ್ಷಣಶಾಸ್ತ್ರ ಕೋರ್ಸಿನ ಪರಿಷ್ಕೃತ ನಿಯಮಾವಳಿಗಳನ್ನು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | ವಿಶ್ವವಿದ್ಯಾಲಯದ ಸ್ನಾತಕ ಶಿಕ್ಷಣಶಾಸ್ತ್ರ ಕೋರ್ಸಿನ ಪರಿಷ್ಕೃತ ನಿಯಮಾವಳಿಗಳನ್ನು ಸಭೆಯು ಅನುಮೋದಿಸಿತು. |
| 14 | 2019/03/14 | 7ನೇ ಘಟಿಕೋತ್ಸವದ ಮೂಲಕ ಪದವಿ ಪಡೆಯುವ ಸ್ನಾತಕ, ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. ವಿದ್ಯಾರ್ಥಿಗಳ ಅರ್ಹತಾ ಪಟ್ಟಿಗೆ ಅನುಮೋದನೆ ಹಾಗೂ ಘನತೆವೆತ್ತ ರಾಜ್ಯಪಾಲರ ಅನುಮೋದನೆಗೆ ಕಳುಹಿಸಲು ಅನುಮತಿ ಕುರಿತು. |
| | ತೀರ್ಮಾನ | 7ನೇ ಘಟಿಕೋತ್ಸವದ ಮೂಲಕ ಪದವಿ ಪಡೆಯುವ ಸ್ನಾತಕ, ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. ವಿದ್ಯಾರ್ಥಿಗಳ ಅರ್ಹತಾ ಪಟ್ಟಿಗೆ ಸಭೆಯು ಅನುಮೋದನೆ ನೀಡಿತು ಹಾಗೂ ಘನತೆವೆತ್ತ ರಾಜ್ಯಪಾಲರ ಅನುಮೋದನೆಗೆ ಕಳುಹಿಸಲು ಅನುಮತಿ ಸೂಚಿಸಿತು. |
| 15 | 2019/03/15 | ಮುಂಬರುವ ಸ್ನಾತಕ, ಸ್ನಾತಕೋತ್ತರ ಹಾಗೂ ವಿವಿಧ ಪದವಿ ಪ್ರಶ್ನೆ ಪತ್ರಿಕೆ ಮುದ್ರಿಸಿಕೊಳ್ಳುವ ಕುರಿತಂತೆ ಚರ್ಚೆ ಹಾಗೂ ತೀರ್ಮಾನದ ಕುರಿತು. |
| | ತೀರ್ಮಾನ | ಪ್ರಶ್ನೆ ಪತ್ರಿಕೆ ಮುದ್ರಣಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯ ಒಪ್ಪಂದ ಮಾಡಿಕೊಂಡಿರುವ ಮೆ॥. ಮಣಿಪಾಲ ಕಂಪನಿಯು ಕಾರಣಾಂತರಗಳಿಂದ ತನ್ನ ಒಪ್ಪಂದವನ್ನು ಇದೇ ಮಾರ್ಚ್ 31 ಕ್ಕೆ ಕೊನೆ ಮಾಡಲು ತೀರ್ಮಾನಿಸಿ ಬರೆದ ಪತ್ರವನ್ನು ಸಭೆಯು ಗಮನಿಸಿತು. ಇದೀಗ ಚುನಾವಣಾ ನೀತಿ ಸಂಹಿತೆ ಬರುವ ನಿರೀಕ್ಷೆ ಇದ್ದು, ಹೊಸ ಟೆಂಡರ್ ಕರೆಯಲು ಬರುವದಿಲ್ಲ. ಹಾಗಾಗಿ, ಸದರಿ ಕಂಪನಿಯೊಂದಿಗೆ ಇನ್ನೊಂದು ಸುತ್ತು ಮಾತನಾಡಿ ಸಮಯ ವಿಸ್ತರಿಸಲು ಕೇಳಿಕೊಳ್ಳಲು ಸೂಚಿಸಿತು. ಒಂದು ವೇಳೆ ಅವರು ಒಪ್ಪದಿದ್ದಲ್ಲಿ, ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಪರೀಕ್ಷೆಗೆ ಅನುಕೂಲವಾಗುವಂತೆ ಕಾನೂನಿಗೊಳಪಟ್ಟು ತೀರ್ಮಾನ ತೆಗೆದುಕೊಳ್ಳಲು ಸಭೆಯು ಕುಲಸಚಿವರು(ಮೌ) ಇವರಿಗೆ ಸೂಚಿಸಿತು ಮತ್ತು ಪ್ರಶ್ನೆಪತ್ರಿಕೆ ಮುದ್ರಿಸಿಕೊಡುವ ಸಂಸ್ಥೆಯ ಬಿಲ್ಲಿನ ಮೊತ್ತವನ್ನು ಪಾವತಿಸಲು ಸಭೆ ಅನುಮತಿಸಿತು. |
| 16 | 2019/03/16 | ಡಾ.ಜಿ.ಸಿ.ಕಲಬುರ್ಗಿ, ಪ್ರಾಧ್ಯಾಪಕರು, ಇವರು ರಾ.ಚ.ವಿ ಗೆ ಸೇರ್ಪಡೆಯಾಗುವ ಪೂರ್ವದಲ್ಲಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಮೂಡಲಗಿಯಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಯ ಸೇವೆಗೆ ಸಲ್ಲಿಸಿದ ರಾಜೀನಾಮೆಯನ್ನು ಅವರ ಸೇವಾ ಪುಸ್ತಕದಲ್ಲಿ ನಮೂದಿಸಿ ಧೃಢೀಕರಿಸುವಂತೆ ಪ್ರಾಚಾರ್ಯರು, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಮೂಡಲಗಿ, ಇವರು ವಿನಂತಿಸಿರುವ ಕುರಿತು. |
| | ತೀರ್ಮಾನ | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಭೆಯು ಕಾನೂನು ಸಲಹೆಗಾರರ ಸಲಹೆಯನ್ನು ಪಡೆದು ಮುಂದುವರೆಯಲು ಸೂಚಿಸಿತು. |

| | | |
|---|---|---|
| 17 | 2019/03/17 | ಬೋಧಕೇತರ ಸಿಬ್ಬಂದಿಗಳ ಸಿಂಧುತ್ವ ಪ್ರಮಾಣ ಪತ್ರವನ್ನು ತರಸಿಕೊಳ್ಳುವುದಕ್ಕೆ ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ಬೋಧಕೇತರ ಸಿಬ್ಬಂದಿಗಳ ಸಿಂಧುತ್ವ ಪ್ರಮಾಣ ಪತ್ರವನ್ನು ತರಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು.** |
| 18 | 2019/03/18 | ಬೋಧಕೇತರ ಸಿಬ್ಬಂದಿಗಳಿಗೆ ಸರಕಾರದ ಸೌಲಭ್ಯಗಳನ್ನು ಒದಗಿಸುವ ಮತ್ತು ಪರಿವೀಕ್ಷಣಾ ಅವಧಿಯನ್ನು ಘೋಷಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಮುಂದಿನ ಸೂಕ್ತ ನಿರ್ದೇಶನ ನೀಡುವ ಕುರಿತು |
| | ತೀರ್ಮಾನ | **ಸರಕಾರದ ಪತ್ರವನ್ನು ಸಭೆಯ ಗಮನಕ್ಕೆ ತರಲಾಯಿತು. ಸದರಿ ವಿಷಯದ ಕುರಿತಂತೆ ಹಿಂದಿನ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಮುಂದುವರೆಯಲು ತೀರ್ಮಾನಿಸಲಾಯಿತು.** |
| 19 | 2019/03/19 | ಸಂಚಿತ ವೇತನದ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ 6ನೇ ವೇತನ ಆಯೋಗದ ಶಿಫಾರಸ್ಸಿನಂತೆ ಪರಿಷ್ಕೃತ ವೇತನ ನಿಗದಿಗೊಳಿಸುವ ಬಗ್ಗೆ. |
| | ತೀರ್ಮಾನ | **ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಭೆಯು ಕಾನೂನು ಸಲಹೆಗಾರರ ಸಲಹೆಯನ್ನು ಪಡೆದು ಮುಂದುವರೆಯಲು ಸೂಚಿಸಿತು.** |
| | | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ಚರ್ಚಿಸುವ ವಿಷಯಗಳು.** |
| I | 2019/03/I | 371(ಜೆ) ಅಡಿಯಲ್ಲಿ ಗ್ರೂಪ್ 'ಡಿ' ನೇಮಕಾತಿಗೆ ಸಂಬಂಧಿಸಿದಂತೆ, ಮುಂದಿನ ಕ್ರಮ ಕೈಗೊಳ್ಳುವ ಕುರಿತು. |
| | ತೀರ್ಮಾನ | **371(ಜೆ) ಅಡಿಯಲ್ಲಿ ಗ್ರೂಪ್ 'ಡಿ' ನೇಮಕಾತಿಗೆ ಸಂಬಂಧಿಸಿದಂತೆ, ಮುಂದಿನ ಕ್ರಮ ಕೈಗೊಳ್ಳಲು ಸಭೆಯು ಅನುಮತಿ ನೀಡಿತು.** |
| II | 2019/03/II | 2011-12 ರಿಂದ 2018-19 ನೇ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶ ಶುಲ್ಕದ ವಿವರಣೆ ಕುರಿತು. |
| | ತೀರ್ಮಾನ | **2011-12 ರಿಂದ 2018-19 ನೇ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶ ಶುಲ್ಕದ ವಿವರಣೆಯನ್ನು ಸಭೆಗೆ ನೀಡಲಾಯಿತು. ಸಭೆಯು ಸದರಿ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಸಂಬಂಧಿಸಿದ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಪ್ರಶಂಸೆ ಪತ್ರ ನೀಡುವುದಾಗಿ ತೀರ್ಮಾನಿಸಿತು.** |
| III | 2019/03/III | ಸರಕಾರದ ಶಿಫಾರಸ್ಸಿನ ಮೇರೆಗೆ ಬೋಧಕೇತರ ಸಿಬ್ಬಂದಿಗಳಿಗೆ ಪರಿಷ್ಕೃತ ವೈದ್ಯಕೀಯ ಭತ್ಯೆಯ ದರವನ್ನು ವಿಶ್ವವಿದ್ಯಾಲಯದಲ್ಲಿ ಪರಿಷ್ಕೃತಗೊಳಿಸಿ ಜಾರಿಗೊಳಿಸುವ ಕುರಿತು. |
| | ತೀರ್ಮಾನ | **ಸರಕಾರದ ಶಿಫಾರಸ್ಸಿನ ಮೇರೆಗೆ ಬೋಧಕೇತರ ಸಿಬ್ಬಂದಿಗಳಿಗೆ ಪರಿಷ್ಕೃತ ವೈದ್ಯಕೀಯ ಭತ್ಯೆಯ ದರವನ್ನು ವಿಶ್ವವಿದ್ಯಾಲಯದಲ್ಲಿ ಪರಿಷ್ಕೃತಗೊಳಿಸಿ ಜಾರಿಗೊಳಿಸಲು ಸಭೆಯು ಅನುಮೋದನೆ ನೀಡಿತು.** |
| IV | 2019/03/IV | ವಿಶ್ವವಿದ್ಯಾಲಯದಲ್ಲಿ ನಡೆಸಲಾಗುವ ಕಾರ್ಯಾಗಾರ, ಪ್ರೊಜೆಕ್ಟ್ ವಿಚಾರ ಸಂಕಿರಣ ಹಾಗೂ ಇನ್ನಿತರ ಕಾರ್ಯಕ್ರಮಗಳಿಗೆ ಆಹ್ವಾನಿಸಲಾಗುವ ಅತಿಥಿಗಳಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗೂ ಗೌರವ ಧನ ನೀಡುವ ಕುರಿತಂತೆ ಒಂದು ಸಮಿತಿಯನ್ನು ರಚಿಸುವ ಕುರಿತು. |
| | ತೀರ್ಮಾನ | **ವಿಶ್ವವಿದ್ಯಾಲಯದಲ್ಲಿ ನಡೆಸಲಾಗುವ ಕಾರ್ಯಾಗಾರ, ಪ್ರೊಜೆಕ್ಟ್ ವಿಚಾರ ಸಂಕಿರಣ ಹಾಗೂ ಇನ್ನಿತರ ಕಾರ್ಯಕ್ರಮಗಳಿಗೆ ಆಹ್ವಾನಿಸಲಾಗುವ ಅತಿಥಿಗಳಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗೂ ಗೌರವ ಧನ ನೀಡುವ ಕುರಿತಂತೆ ಮಾನ್ಯ ಕುಲಪತಿಗಳು ಒಂದು ಸಮಿತಿಯನ್ನು ರಚಿಸಿ, ಸದರಿ ಸಮಿತಿ ಶಿಫಾರಸ್ಸುಗಳನ್ವಯ ಮುಂದುವರೆಯಲು ಸಭೆಯು ಸೂಚಿಸಿತು.** |

| | | |
|---|---|---|
| V | 2019/03/V | ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ, ಯು.ಜಿ.ಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ನ್ಯಾಕ, ಬೆಂಗಳೂರು ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ **Rejuvenation of Undergraduate Education** ಎಂಬ ವಿಷಯದ ಕುರಿತು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಆಯೋಜಿಸಿಲಾದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ರೂ. ಒಂದು ಲಕ್ಷಗಳ ಪ್ರಾಯೋಜಕತ್ವವನ್ನು ನೀಡಿದ್ದಕ್ಕಾಗಿ ಸಭೆಯು ಅನುಮೋದನೆ ನೀಡಿತು ಹಾಗೂ ಸದರಿ ವಿಚಾರ ಸಂಕಿರಣಕ್ಕೆ ಹಾಜರಾದ ಸಿಬ್ಬಂದಿಗಳ ನೋಂದಣಿ ಶುಲ್ಕ, ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಯನ್ನು ವಿಶ್ವವಿದ್ಯಾಲಯದಿಂದ ಭರಿಸಿದ್ದಕ್ಕೆ ಸಭೆಯು ಅನುಸಮರ್ಥನೆ ನೀಡಿತು. |

ಕೊನೆಯದಾಗಿ ಕುಲಸಚಿವರು(ಮೌ) ಇವರು ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯು ಸಂಪನ್ನಗೊಂಡಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಗೌರವಾನ್ವಿತ ಸಿಂಡಿಕೇಟ್ ಸದಸ್ಯರುಗಳಿಗೆ,

ಪ್ರತಿ ಮಾಹಿತಿಗಾಗಿ :

ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.